3686(4598); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು); ಮಾನ್ಯ ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಸಿ.ಇ.ಟಿ. ಘಟಕದಿಂದ ವಿಭಾಗದ ಮಟ್ಟದ ಪರೀಕ್ಷೆ ನಡೆಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವ ವರ್ಷ ಜಾರಿಗೆ ತರಲಾಗುವುದು?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ) ಸಿ.ಇ.ಟಿ. ಘಟಕದಿಂದ ನಡೆಸುವ ಪರೀಕ್ಷೆಯನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಹಾಗೂ ಕೆಲವು ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲೂ ನಡೆಸಲಾಗುತ್ತಿದೆ. ಒಟ್ಟಾರೆ ರಾಜ್ಯದ 41 ಸ್ಥಳಗಳಲ್ಲಿ (182 ಪರೀಕ್ಷಾ ಕೇಂದ್ರಗಳಲ್ಲಿ) ಪರೀಕ್ಷೆ ನಡೆಸಲಾಗುತ್ತಿದೆ. ಆದರೆ ಕೌನ್ಸಿಲಿಂಗ್‌ನ್ನು ಬೆಂಗಳೂರಿನಲ್ಲಿ ನಡೆಸಲಾಗುತ್ತಿದೆ. ಎಲ್ಲಾ ಜಿಲ್ಲೆಗಳಿಗೆ ಅಥವಾ ವಿಭಾಗಗಳಿಗೆ ವಿಸ್ತರಿಸುವುದು ಸದ್ಯಕ್ಕೆ ಸಾಧ್ಯವಿರುವುದಿಲ್ಲ.

3687(4599); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು);

ಮಾನ್ಯ ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು); ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರು.

ಅ) 1999 ರಿಂದ 2004ರ ವರೆಗೆ ರಾಜ್ಯದ ಸಿ.ಇ.ಟಿ. ಘಟಕದಿಂದ ಅರ್ಹತೆ ಪಡೆದು ಪಾಸಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಮಾಹಿತಿಯನ್ನು ನೀಡುವುದು;

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಸಿ.ಇ.ಟಿ. ಘಟಕ 1994ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿದ್ದು, 1994ನೇ ಸಾಲಿನಿಂದ 2004ನೇ ಸಾಲಿನವರೆಗೆ ಪ್ರತಿ ವರ್ಷವೂ ಸಂಬಂಧಪಟ್ಟ ವಿದ್ಯಾರ್ಥಿಗಳ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಮ್ಯಾಗ್ನೆಟಿಲ್ ಟೇಪ್‌ಗಳಲ್ಲಿ ಶೇಖರಿಸಿ ಇಡಲಾಗುತ್ತಿದೆ. ಆದರೆ, 1994–95 ರಿಂದ 1997–98ರ ವರೆಗಿನ ವಿದ್ಯಾರ್ಥಿಗಳ ಮಾಹಿತಿ ಹಾಗೂ ಅಂಕಿ ಅಂಶಗಳನ್ನುಳ್ಳ ಮ್ಯಾಗ್ನೆಟಿಕ್ ಟೇಪ್‌ಗಳು ಪ್ರಸ್ತುತ ರೀಡ್ ಆಗುತ್ತಿಲ್ಲವಾದ್ದರಿಂದ ಸಿ.ಇ.ಟಿ. ಕಂಪ್ಯೂಟರ್‌ಗಳಲ್ಲಿ ಸದರಿ ಮಾಹಿತಿಗಳು ಸದ್ಯಕ್ಕೆ ಲಭ್ಯವಾಗುತ್ತಿಲ್ಲ ಆದ್ದರಿಂದ ಉಳಿದ ಅವಧಿಯ, ಅಂದರೆ 1998–99 ರಿಂದ 2004–05ರ ವರೆಗಿನ ಅವಧಿಯಲ್ಲಿ ರಾಜ್ಯದ ಸಿ.ಇ.ಟಿ. ಘಟಕದಿಂದ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಅರ್ಹತೆ ಪಡೆದು ಪಾಸಾದ, ಕರ್ನಾಟಕ ಅಭ್ಯರ್ಥಿಗಳ ಜಿಲ್ಲಾವಾರು ಅಂಕಿ–ಅಂಶಗಳನ್ನು ಲಗತ್ತು ತಃಖ್ತೆಯಲ್ಲಿ ನೀಡಲಾಗಿದೆ.